ನೀವು ಹೋಗಿ ಮಲಗಿ ಸಾರ್. ನಾನಿಲ್ಲೇ ಇರ್ತೀನಿ; ಅಗತ್ಯ ಬಿದ್ರೆ ಕರೀರಿ."

ರೋಹಿತ್ ಅನುಮಾನದಿಂದ ಅವನತ್ತ ನೋಡಿ ಬಾಗಿಲು ಮುಚ್ಚಿಕೊಂಡ.

ಮನಸ್ಸು ಯಾಕೆ ಇಷ್ಟು ಗಲಿಬಿಲಿಯಾಗುತ್ತಿದೆ. ಥಾಮಸ್‌ನ ತಲೆಯ ಆಕೃತಿ, ಚೇರಿನ ಮೇಲೆ ಕೂತ ಆಕೃತಿ ಎರಡೂ ಒಂದೇ ರೀತಿ ಇದ್ದುವಲ್ಲ? ಅದು ಹೇಗೆ? ಆದರೆ ಥಾಮಸ್ ಆಚೆ ಕುಡುಕರ ಜಗಳ ಬಿಡಿಸುತ್ತಿದ್ದ. ಅಂದರೆ ಅವನು ಒಳಗೆ ಬಂದಿರುವ ಸಾಧ್ಯತೆಯಿಲ್ಲ! ಛೆ... ಇದೆಂತಾ ಅಸಂಬದ್ಧ ವಿಚಾರ. ಒಳಗಿನಿಂದ ಬಾಗಿಲು ಹಾಕಿರುವಾಗ ಥಾಮಸ್ ಒಳಗೆ ಬರಲು ಹೇಗೆ ಸಾಧ್ಯ! ಒಬ್ಬ ಮನುಷ್ಯ ಒಂದೇ ಸಮಯದಲ್ಲಿ ಎರಡುಕಡೆ ಇರಲು ಸಾಧ್ಯವೆ? ಇಲ್ಲ, ಇದು ಸಾಧ್ಯವೇ ಇಲ್ಲ. ಇದೆಲ್ಲಾ ತನ್ನ ಮನಸ್ಸಿನಲ್ಲಿನ ಗಲಿಬಿಲಿ. ಥಾಮಸ್ ದೆವ್ವ ಇದೆ ಎಂದದ್ದಕ್ಕೇ ಮನಸ್ಸು ಆಡುತ್ತಿರುವ ಆಟ ಇದು! ದೆವ್ವ ಖಂಡಿತಾ ಇಲ್ಲ. ಇರಲು ಸಾಧ್ಯವೂ ಇಲ್ಲ. ಅದು ಇದೆ ಎನ್ನಲು ಯಾವುದೇ ಪುರಾವೆ ಇಲ್ಲ. ಎಲ್ಲ ಜನರು ಹೇಳುವ ಕತೆಗಳು, ಭ್ರಮೆಗಳು. ಈಗ ತಾನೂ ಚೇರಿನಲ್ಲಿ ಕಂಡಿದ್ದನ್ನು ಕೆಲವರಿಗೆ ಹೇಳಿದರೆ ಅದೇ ದೆವ್ವದ ಕತೆಯಾಗುತ್ತದೆ.

ಯೋಚನೆಗಳನ್ನು ದೂರ ಸರಿಸಿ ನಿದ್ರಿಸುವ ಪ್ರಯತ್ನ ಮಾಡಿದ ರೋಹಿತ್. ನಿಧಾನಕ್ಕೆ ನಿದ್ರೆ ಆವರಿಸಿತು. ಬೆಳಗ್ಗೆ ಎದ್ದಾಗ ಗಂಟೆ ಆರೂವರೆ. ಹತ್ತರ ಸಮಯಕ್ಕೆ ಶಾಸಕರ ಭವನಕ್ಕೆ ಹೋದರೆ ಸಾಕು. ಬೇಕಾದಷ್ಟು ಸಮಯವಿದೆ. ಹೌದು, ಮನೆಗೆ ಫೋನು ಮಾಡಿಲ್ಲ. ಬಸ್ಸು ಇಳಿದಾಗ ಮಾಡಿದ್ದು ಅಷ್ಟೆ.

ಮುಖ ಮಾರ್ಜನೆ ಮುಗಿಸಿ ಕಾಫಿ ತರಿಸಿಕೊಳ್ಳಲು ಬೆಲ್ ಮಾಡಿ, ಪತ್ನಿಗೆ ಫೋನು ಮಾಡಲು ಮೊಬೈಲು ಕೈಗೆತ್ತಿಕೊಂಡ. ನಂಬರ್ ಡಯಲ್ ಮಾಡಿ ರಿಂಗ್ ಆಗುವುದನ್ನು ಕೇಳಿಸಿಕೊಳ್ಳುವಾಗ ರೂಮ್ ಬಾಯ್ ಬಂದು ಬಾಗಿಲು ಬಡಿದ. ಪತ್ನಿಯೊಂದಿಗೆ ಮಾತಾಡುತ್ತಲೇ ಹೋಗಿ ಬಾಗಿಲು ತೆರೆದ ರೋಹಿತ್.

ರೂಮ್‌ಬಾಯ್ ಬದಲಾಗಿದ್ದ. ಥಾಮಸ್ ತನ್ನ ಡ್ಯೂಟಿ ಮುಗಿಸಿ ಹೋಗಿರಬೇಕು ಎಂದುಕೊಂಡ ರೋಹಿತ್. ಕಾಫಿಗೆ ಹೇಳಿ ಮಡದಿಯ ಜೊತೆ ಮಾತು ಮುಂದುವರಿಸಿದ. ಮಾಮೂಲು ಸಂಸಾರದ ಮಾತುಕತೆಗಳು. ಇಂದು ರಾತ್ರಿ ಆದರೆ ಹೊರಟುಬಿಡುತ್ತೇನೆಂದು ರೋಹಿತ್ ಹೇಳಿದ. ಬೇಗನೆ ಬಂದುಬಿಡಿ ಎಂದು ಪತ್ನಿ ಒತ್ತಾಯಿಸಿದಳು. ಸುಮ್ಮನೆ ಹೂಂಗುಟ್ಟಿದ.

ಪರಿಚಾರಕ ಬಂದು ಕಾಫಿ ತಂದಿಟ್ಟು ಹೋದ. ದೆವ್ವದ ಬಗೆಗೆ ಅವನನ್ನು ಕೇಳಬೇಕೆಂದಿದ್ದ. ಆದರೆ ಪತ್ನಿಯ ಜೊತೆಗಿನ ಮಾತು ಅಡ್ಡಿಯಾಗಿತ್ತು. ಅದೇನೂ ದೊಡ್ಡ ವಿಷಯವಲ್ಲ, ಅದಕ್ಕೆ ಅನಗತ್ಯವಾದ ಪ್ರಾಮುಖ್ಯತೆ ಕೊಡಬಾರದೆನ್ನಿಸಿತು.

ಕಾಫಿ ಮುಗಿಸಿ ಪೇಪರಿನ ಮೇಲೆ ಕಣ್ಣಾಡಿಸಿದಾಗ ಆಶ್ಚರ್ಯ ಕಾದಿತ್ತು! ಪೊಲೀಸ್ ಅಧಿಕಾರಿಯೊಬ್ಬರ ಆತ್ಮಹತ್ಯೆ ಪ್ರಕರಣ ಹೆಡ್‌ಲೈನ್ಸ್ ಆಕ್ರಮಿಸಿತ್ತು. ಅದೂ ಅವನ ಹುಟ್ಟೂರು ದಾವಣಗೆರೆಯಲ್ಲೇ! ಹಿಂದಿನ ದಿನ ಹೋಟೆಲೊಂದರಲ್ಲಿ ಆತ್ಮಹತ್ಯೆ ಮಾಡಿಕೊಳ್ಳುವ ಮುನ್ನ ಬರೆದ ಮರಣಪತ್ರದಲ್ಲಿ ಒಬ್ಬ ಮಂತ್ರಿ ಮತ್ತು ನಾಲ್ವರು ಅಧಿಕಾರಿಗಳ ಹೆಸರು ಸೂಚಿಸಿ, ತನ್ನ ಮೇಲಿನ ಸತತ ಕಿರುಕುಳದಿಂದ ಆತ್ಮಹತ್ಯೆ ಮಾಡಿಕೊಳ್ಳುತ್ತಿರುವುದಾಗಿಯೂ ತನ್ನ ಮರಣಕ್ಕೆ ಆ ಐವರೇ ಕಾರಣ ಎಂದೂ ಉಲ್ಲೇಖಿಸಿದ್ದರು.

ಪ್ರಯಾಣದಲ್ಲಿ ಇದ್ದುದರಿಂದ ಇದು ತನಗೆ ಗೊತ್ತಾಗಿಲ್ಲ. ಜೊತೆಗೆ ಬೇಗನೆ ನಿದ್ರಿಸಿದೆ. ಟೀವಿಯಲ್ಲಿ ಸುದ್ದಿ ನೋಡಲೂ ಸಮಯವಿಲ್ಲವಾಗಿತ್ತು. ತಕ್ಷಣ ಟೀವಿ ಆನ್ ಮಾಡಿದ.